ಪತ್ರಿಕಾ ತುಣುಕುಗಳು
PAPER CUTTINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 26/10/2017

# ಕಲ್ಯಾಣ ಸಮಿತಿ ಅಸಮಾಧಾನ

ಬೆಂಗಳೂರು: ಮೀಸಲು ಬಡ್ತಿ ಅನ್ವಯ ಬಡ್ತಿ ಹೊಂದಿ ಸ್ಥಳ ನಿಯುಕ್ತಿ ಹೊಂದಿದ ಮುಖ್ಯ ಇಂಜಿನಿಯರ್‌ಗಳಿಗೆ ಸರ್ಕಾರ ಸೂಚಿಸಿದ ಸ್ಥಳದಲ್ಲಿ ಅಧಿಕಾರ ಸ್ವೀಕರಿಸಲು ಬಿಡದ ಪ್ರಕರಣವನ್ನು ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣ ಸಮಿತಿ ಗಂಭೀರವಾಗಿ ಪರಿಗಣಿಸಿದೆ.

ಅಧಿಕಾರಿಗಳ ವರ್ತನೆಗೆ ಸಮಿತಿ ಅಸಮಾಧಾನ ವ್ಯಕ್ತಪಡಿಸಿದೆ.

**ಅಧಿಕಾರ ಸ್ವೀಕರಿಸಲು ತಡೆ ಪ್ರಕರಣ**

ಮೀಸಲು ಮುಂಬಡ್ತಿ ಅನ್ವಯ ಬಡ್ತಿ ಪಡೆದ ಜಿ.ಸೋಮಸುಂದರ್ ಅವರಿಗೆ ಹಾಸನ ಜಿಲ್ಲೆ ಹೇಮಾವತಿ ಯೋಜನಾ ವಲಯದ (ಗೊರೂರು)ದಲ್ಲಿ ಜವಾಬ್ದಾರಿ ತೆಗೆದುಕೊಳ್ಳಲು ಸರ್ಕಾರ ಅವಕಾಶ ನೀಡಿತ್ತು. ಆದರೆ, ಅಲ್ಲಿ ಹೋದಾಗ, ಆ ಹುದ್ದೆಯಲ್ಲಿ ಪ್ರಭಾರದಲ್ಲಿರುವ ಅಧೀಕ್ಷಕ ಇಂಜಿನಿಯರ್ ಮಂಜಪ್ಪ ಅವಕಾಶ ನೀಡಿಲ್ಲ. ಮಂಜಪ್ಪ ಅವರನ್ನೇ ಪ್ರಭಾರದಲ್ಲಿ ಮುಂದುವರಿಸಬೇಕೆಂದು ಜೆಡಿಎಸ್‌ನ ಪ್ರಮುಖರು, ಬಿಜೆಪಿ ಶಾಸಕರೊಬ್ಬರು ಸಿಎಂಗೆ ಪತ್ರ ಬರೆದಿದ್ದರು. ಈ ಬೆಳವಣಿಗೆಯನ್ನು ರಾಜ್ಯಪಾಲರ ಗಮನಕ್ಕೂ ತರಲಾಗಿತ್ತು. ಸಮಿತಿ ಅಧ್ಯಕ್ಷ ಎಸ್. ಅಂಗಾರ ಹಾಗೂ ಎಸ್. ಮಹೇಶ್ ಸೇರಿ ಇತರರು ಸರ್ಕಾರದಿಂದ ವಿವರಣೆ ಬಯಸಿದ್ದಾರೆ ಎಂದು ತಿಳಿದುಬಂದಿದೆ.